303

ಕೆಲಸದ ವಿವರ	ಕ್ಕೆ	ಮೊತ್ತ
ಸುರಂಗ	ಸಲೆಗಜ	8
ಕಲ್ಲು ಮೆಟ್ಟು ಮೆಟ್ಟುಗಿ ಮಾಡುವಿಕೆ	ಚದರ ಅಡಿ	9891
ಸಾಧಾರಣವಾವ ಮೆಟ್ಟ ಕಾವುಗಾರಿ	ಸೆಲೆಗಜ	180
ಸೂರ್ಕಿಗಾರೆ ಕಲ್ಲು	ಸಲೆಅಡಿ	71004
ಸಂಕ್ಟ್ರಾಸುವಾಡಿದ ಕಲ್ಲು ಸೂರ್ತಿಯಿಂದ ಕಟ್ಟಿಲು	ಡಿಟೋ	12767
ಸಂಕ್ಟ್ರಾಸುವಾಡಿದ ಕಲ್ಲಿನ ಮಂಡೇರಿ	ಚದರಅಡಿ	6774
ಪೊರ್ಪ್ಲೆಟಿಯಾ ತೀನೆಸುಂಣದ ಸಂಮ್ಮಗಾರೆ	ಚದರ	266·79
ಪೇಲಿಂಗು	ಮೊತ್ತ ರೂ.	
ಇನ್‌ಸ್ಪೆಕ್ಷ್ ಲಾಡಿಜ್	ಡಿಟೋ	

ತಾಮಸ್. ಇಫ್ಲ್ಯೂ,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 6ನೇ ಏಪ್ರೆಲ್ ಸ್ಯ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಮಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರ್ನ ಳ್ಳಿ ಪೇಟೆಯಲ್ಲಿ ಟೋಲಗೇಟ್ಸೆಂಬ ಸುಂಕದ ಕಟ್ಟೆ ಒಳಗೆ ಸ್ಯ 1896ನೇ ಇಸವಿ ಜುಲೈ ಮಾಹೆ 1ನೇ ಮಕ್ತಂ ಲಾಗಾಯತ್ತು ಸ್ಯ 1897ನೇ ಜೂನ್ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಸ್ಯ 1896ನೇ ಇಸವಿ ಮೇ ತಾ ೀಖು 4ನೇ ಸೋಮವಾರ ಹಗಲು 11 ಘಂಟೆಗೆ ಸಕಲೇಶಪುರದ ಪೊಕ್ಕಾಂನಲ್ಲಿ ತಾಲ್ಲೂಕು ಕಚೇರಿ ಬಳಿ ಅಮಲ್ದಾರ್‌ರಿಂದ ಬಹಿ ಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಛಡನಪಾಲನ್ನಾಗಲೀ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೆ ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರವನ್ನು ಹಾಸನ ಡಿಸ್ಟ್ರಿಕ್ಟು ಕಮ್ಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ. ಮತ್ತು ಡಿಪ್ಯೂಟಿ ಕಮ್ಮಿಷನರವ ಂಥ ಮಂಜೂರಾದ ಹೊರ್ತು ಹರಾಜು ಖಾಯಂ ಆವ ಹಾಗೆ ತಿಳಿಯಕೂಡದು.

3. ಛಡವರಖಾಸ್ತುದಾರನು ಹರಾಜು ಮೊಬಲಗಿನ ಪೈಕಿ ನಾಲ್ಕರಲ್ಲಿ ಬಂದು ಭಾಗವನ್ನು ಆ ಕೂಡಲೆ ಡಿಪಾಜಿಟ್ ಇಡಬೇಕ ದ್ದೆ ಖಾಕಿ ಉಳಿದ ಮೊಬಲಗನ್ನು ಸ್ಯ 1896ನೇ ಇಸವಿ ಜುಲೈ 20ರ ಲಾಗಾಯತು ಸಮವಾದ 3 ಖಿಸ್ತುಗಳಾಗಿ ಪ್ರತಿ ಮಾಹೆ 20ನೇ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿ ಇರಬೇಕು. ಹರಾಜು ಮಂಜೂರಾತಿಯು ತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯ ತು 15 ದಿವಸಗಳ ಒಳಗೆ ಕ್ರಮವಾದ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಈ ಕೆಳಗೆ ನಮೂದಿಸುವ ಷರತ್ತಿಗೆ ಬಳಿಪಟ್ಟು ಕಂಟ್ರಾ ಕ್ಟನಂತೆ ತಾನು ಸರಿಯಾಗಿ ನಡಗೊಳ್ಳತಕ್ಕ ಬ್ಯೆ ಖಾತರಿ ಜಾಮೀನ್ ಕೊಡಬೇಕು. ಡಿಪಾಜಿಟ್ ಮೊಬಲಗು ಹಾಜ್ರ್ಮಾಡದೇಯೂ ಮುಚ್ಚಳಿಕೆ ಬರದುಕೊಡದೇಯೂ ಜಾಮೀನ್ ಕೊಡದೇಯೂ ತಪ್ಪಿದರೆ ಬಾಬನ್ನು ದುಸರೆ ಹರಾಜ್ ಮೂಲಕ ವಿಕ್ರಯಿಸುವದಲ್ಲದೆ ಷ್ಟಕ್ಕೆ ತಪ್ಪಿತಸ್ಥನಾದ ಇಜಾರೆದಾರನನ್ನು ಗುರಿಪಡಿಸುತ್ತಿಯಿ ರಿವಾಯಿ ಹಾಂಗೆ ಬಾಬನ್ನ ದುಸರೆ ಹರಾಜ್ ಮಾಡೋಣದರಲ್ಲಿ ಉಂಟಾ ಗುವ ಅವಾಯಕ್ಕೆ ಅವನು ಭಾಗಿಯಾಗಲಾರನು.

4. ಖಿಸ್ತು ಪ್ರಕಾರ ಹಣ ಕೊಡವವಕ್ಕೆ ತಪ್ಪುದರೆ ಹಾಂಗೆ ಬಾಕಿ ಆದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ಮಾಸಿಯಾ ಒ ರೂಪಾಯಿ 1ಕ್ಕೆ ಒಂದು ಪೈನಂತೆ ಬಡ್ಡಿ ಕೀಸಿ ವಸೂಲ್ಮಾಡಲ್ಪಡುತ್ತೆ. ಪುತ್ತು ಡಿಪ್ಯೂಟಿ ಕಮ್ಮಿಷನರ್ ಸಾಹೆಬರವರಿಗೆ ಯುಕ್ತ ಕಾಣದರೆ ಅಥವಾ ಜಾಮೀರ್ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟು ದುಸರ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು. ಅದರಿಂದ ರಿಂ ರಕ್ಕೇನ ದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟುದಾರನಿಂದಲೇ ಆಗಲಿ ಅಥವಾ ಜಾಮೀರ್ದಾರನಿಂದಲೇ ಆಗಲಿ ಕಂದಾ ಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜ್ ಮೊಬಲಗು ರಿವಾಯಿ 3—4ನೇ ಕಲಂಗಳಲ್ಲಿ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಖಜಾನಿಗೆ ಸಲಾಯಿ ಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಬಂದಾಣಿಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಇಜಾರೆದಾರನು ಬದ್ಧನಾಗಿರ ಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲ್‌ನಲ್ಲಿ ನಮೂದಿರುವ ದರಗಳ ಪ್ರಕಾರವೇನೆ ಟೋಲ್ ವಸೂಲ್ಮಾಡಬೇಕು ಮತ್ತು ಸ್ಯ 1876ನೇ ಇಸವಿ ನವೆಂಬರ್ 4ನೇ ಮಕ್ತಂ 274ನೇ ನಂಬರ್ ಲೇಟ್ ಜೇಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷನ್ನಿಗೆ ಫಾಯಿಷಾಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

7. ಪ್ರತಿ ದಿನದ ಟೋಲ್‌ಯಾತ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರುವಾಕವಾದ ಲೆಕ್ಕವನ್ನು ಇಡಲು ಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟ ಮತ್ತು ತಾಲ್ಲೂಕು ಅಧಿಕಾರಿಗಳ ತನಿಖೆಗೆ ಸದರೀ ಲೆಕ್ಕವು ಒಳಪಟ್ಟು ಇರತಕ್ಕದ್ದು.

8. 7ನೇ ಷರತ್ತಿನಲ್ಲಿ ನಮೂದಿಸಿರುವ ಮೇರೆ ಕರಾರ್‌ವಾಕಾ ಅಂಮದ್ ರಫ್ತು ಲೆಖ್ಕವನ್ನು ಇಡಲೋಸ್ಕರ ಒಬ್ಬಂದಿ ಅಂದರೆ ಒಬ್ಬ ಮುತ್ಸದ್ದಿಯ ಖರ್ಚನ್ನು ಕಂಟ್ರಾದಾರನೇ ವಹಿಸಬೇಕ್ಕು.

9. ಗವರ್ಮೆಂಟ್ ಟೋಲ್‌ಮನೆ ಮತ್ತು ಟೋಲ್‌ಗೇಟನ್ನು ಸಹ ಕಂಟ್ರಾದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನು ಪೂರಾ ದಾರಸ್ತಿನಲ್ಲಿ ಆತನು ಇಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ಮಾಹೆ ಗುರ್ರೆ ತಾರೀಖಿನಲ್ಲಿ ಹಿಂದಲ ತಿಂಗಳ ಟೋಲ್ ವಸೂಲಿ ಲೆಖ್ಕವನ್ನು ಮಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಖ್ತೆಲು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿ ಇದೆ.

		ರೂ	ಆ	ಪೈ
1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಡಿಟೋ ಎರಡು ಡಿಟೋ	1	0	0
3	ಪ್ರತಿ ಯಕ್ತಾ ಮೇಲು	0	4	0
4	ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಬಂದಕ್ಕೆ	0	2	0
5	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಬಂದಕ್ಕೆ	1	8	0
6	ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	12	0
8	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಆಗಿದ್ದರೆ	0	8	0
10	ಡಿಟೋ ಡಿಟೋ ಭರ್ತಿಇಲ್ಲದಿದ್ದರೆ	0	4	0
11	ಎರಡು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ, ಹೇಸರು ಕತ್ತೆಗಳಿಂದ ಎಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	4	0
12	ಡಿಟೋ ಭರ್ತಿ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಇದ್ದರೆ	0	1	0
14	ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಪ್ರತಿ ಕುದುರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗುವ ಪ್ರ 1 ಕುದುರೆಗೂ	0	0	9
20	ಪ್ರತಿ ತಟ್ಟು ಯಾ ಹೇಸರುಕತ್ತೆ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಪ್ರತಿ ತಟ್ಟು ಯಾ ಹೇಸರುಕತ್ತೆ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22	ಪ್ರತಿ ಕತ್ತೆಗೂ ಹೊರೆ,ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	6
23	ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿ	0	0	1
25	ಎಂಟು ಜೋಯಿಗಳ ವಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ	1	0	0
26	ಆರು ಜೋಯಿಗಳೊಡನೆ ಡಿಟೋ	0	12	0
27	ನಾಲ್ಕು ಜೋಯಿಗಳೊಡನೆ ಡಿಟೋ	0	8	0
28	ಇಬ್ಬರು ಜೋಯಿಗಳೊಡನೆ ಡಿಟೋ	0	4	0

ನಡದು ಬರುವ ಮಾರ್ಗಸ್ತರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಇಸ್ತಿಹಾರಿನಾಮೆ.

ತಾರೀಖು 24ನೇ ಮಾರ್ಚಿ ಸ್ ೧೮೯೬ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚೀಲೂರು ತಾಲ್ಲೂಕು ದೊಡ್ಡಬೆಳ್ಳೋದು ಗ್ರಾಮದಲ್ಲಿ ಇರುವ ಇದರಿಂದ ನಮೂದು ಮಾಡಿರುವ ಜಮೀನಿಗೆ ಕಾಫೀ ಸಾಗುವಳಿಬಾಬ್ತಿಗಾಗಿ ದರಖಾಸ್ತು ಬಂದಿರೋದರಿಂದ ಸ್ ೧೮೯೬ನೇ ಇಸವಿ ಮೇ ತಾರೀಖು 18ನೇ ಸೋಮವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಡಿಸಿ ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಚೀಲೂರು ಪೊಕ್ಕಾಮಿನಲ್ಲಿ, ಬಹಿರಂಗವಾದ ಹರಾಜು ಮೂಲಕ ಆವುಗಳು ವಿಕ್ರಯಿಸಲ್ಪಡುವವು.